**ಡಿ.ಡಬ್ಲೂ-2**

ದಿನಾಂಕ: 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ದೂರುದಾರ ಪರ ಶ್ರೀ.ಎಸ್.ಬಿ.ಹೆಚ್ ವಕೀಲರಿಂದ ಃ**

1. ಆರೋಪಿ ನನ್ನ ಅಣ್ಣನಾಗಬೇಕು. ನಾವು ಮೂರು ಜನ ಅಣ್ಣತಮ್ಮಂದಿರು ಅವರೆಂದರೆ ನಾನು, ಆರೋಪಿ ಮತ್ತು ಗೋಪಾಲ. ದೂರುದಾರರಿಗೆ 6,50,000/- ರೂಪಾಯಿ ಹಣ ಪಾವತಿಸಿದ ನಂತರ ಅವರ ಜೊತೆ ವ್ಯವಹಾರ ಮುಗಿಯಿತು ಎಂದರೆ ಸರಿ. ಆರೋಪಿ 2013 ರಲ್ಲಿ ಫಿರ್ಯಾದಿ ಜೊತೆ ವ್ಯವಹಾರ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಮತ್ತು 11 ಲಕ್ಷ ರೂಪಾಯಿಗಳಿಗೆ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ಸಹಾಯ ಮಾಡಲು ಮತ್ತು ಫಿರ್ಯಾದಿಯ 11 ಲಕ್ಷ ರೂಪಾಯಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ಅಸಲು ದಾವೆ ಸಂಖ್ಯೆ 15/2026 ನ್ನು ನನ್ನ ಅಣ್ಣ ಅಂದರೆ ಆರೋಪಿ ಮತ್ತು ಲಕ್ಷ್ಮಿ ಬ್ಯಾಂಕ ವಿರುದ್ಧ ಪಾಲು ವಾಟ್ನಿಗಾಗಿ ದಾಖಲಿಸಿದ್ದೇನೆ ಎಂದರೆ ಸರಿ. ಅದರಲ್ಲಿ ಹುಬ್ಬಳ್ಳಿ ಮಾರಾಟ ಅಧಿಕಾರಿಯನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಆರೋಪಿ ಮಾಡಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ. ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ